ಇಲ್ಲದಿದ್ದರೆ 60 ವರ್ಷಕ್ಕೂ ಹೊಚ್ಚಿನ ವಯಸ್ಸಿನವರನ್ನು ಈ ಖಾತೆಗೆ ನೇಮಕ ಮಾಡುವುದು ಒಳ್ಳೆಯದು.

ಶ್ರೀ ಎಸ್. ರಮೇಶ್ : ತಮ್ಮ ಸಲಹೆಗಳನ್ನು ಮುಖ್ಯಮಂತ್ರಿಗಳು ಇದ್ದಿದ್ದರೆ ಪರಿಶೀಲಿಸಬಹುದಾಗಿತ್ತು. ಈಗ ಅದು ನನ್ನ ಕೈಯಲ್ಲಿ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಿಮ್ಮ ಪರಿಶೀಲನೆ ಮತ್ತು ಭರವಸೆ ನಮಗೆ ಬೇಡ.

ಶ್ರೀ ಎಸ್. ರಮೇಶ್ : ವಯಸ್ಸಾದವರು ಈ ಖಾತೆಗೆ ಬರಬೇಕೆಂಬ ನಿಮ್ಮ ಸಲಹೆಯನ್ನು ಮುಖ್ಯ ಮಂತ್ರಿಗಳು ಪರಿಶೀಲಿಸಬೇಕು. ನನಗೆ ಸೇರಿರತಕ್ಕಂಥ ಪ್ರಶ್ನೆಗಾದರೆ ನಾನು ಉತ್ತರ ಕೊಡಬಹುದು. ನಿಮ್ಮ ಜಿಲ್ಲೆಗೆ ಕೊಟ್ಟಿರುವ 68 ಸಾವಿರ ರೂಪಾಯಿಗಳು ಸಾಲುವುದಿಲ್ಲ ಎನ್ನುವ ವಿಷಯವನ್ನು ಹೇಳಿದ್ದೀರಿ. ಅದು ಈಗಾಗಲೇ ಸರ್ಕಾರದ ಮುಂದೆ ಬಂದಿದೆ. ಅವಶ್ಯಕತೆ ಇದ್ದು ಕೇಳಿದರೆ ತಾನೇ ನಾವು ಕೊಡುವುದಕ್ಕೆ ಆಗುವುದು? ಕೆಲವು ಜಿಲ್ಲೆಗಳಲ್ಲಿ ಯುವ ಜನ ಮೇಳಗಳನ್ನು ಮಾಡುತ್ತೇವೆಂದು ಹಣ ಕೇಳುತ್ತಾರೆ. ಆಗ ಹಣವನ್ನು ಬಿಡುಗಡೆ ಮಾಡುತ್ತೇವೆ. ಕೆಲವರು ಕೇಳದೆ ಮೇಳ ಮಾಡಿ ಹಣವನ್ನು ಬಿಡುಗಡೆ ಮಾಡಿ ಎಂದರೆ ಹೇಗೆ? 3 ಲಕ್ಷ ಖರ್ಚು ಮಾಡಿದ್ದೇವೆ, ಸರ್ಕಾರದಿಂದ 2 1/2 ಲಕ್ಷ ಕೊಡಿ ಎಂದರೆ ಹೇಗೆ? ಸರ್ಕಾರದ ಗಮನಕ್ಕೆ ಏನು ವಿಷಯ ಬಂದಿದೆಯೋ ಆ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರ ಮಾಡಿ ಸಹಾಯ ಮಾಡಲಾಗುತ್ತದೆ. ಇನ್ನು ಮುಂದೆ ಸಹ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡಬೇಕೆಂದು ನನಗೂ ಆಸೆ ಇದೆ. ಮಾನ್ಯ ಮುಖ್ಯ ಮಂತ್ರಿಗಳವರಿಗೂ ಇದೆ. ಈಗ ಅವರೇ ಆರ್ಥಿಕ ಮಂತ್ರಿಗಳಾಗಿರುವುದರಿಂದ ತಮ್ಮ ಸಲಹೆಯನ್ನು ಅವರ ಮುಂದೆ ಇಡುತ್ತೇನೆ.

ಭೂ ನ್ಯಾಯ ಮಂಡಳಿಯ ಬಗ್ಗೆ

541 - ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಭೂ ನ್ಯಾಯ ಮಂಡಳಿಯಲ್ಲಿ ಗೇಣಿದಾರರಿಗೆ ವಿರುದ್ಧವಾಗಿ ತೀರ್ಮಾನವಾದ ಎಷ್ಟು ಪ್ರಕರಣಗಳು ಉಚಿತ ಕಾನೂನು ನೆರವು ಮಂಡಳಿಯ ಮೂಲಕ ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ಬಂದಿವೆ?

ಆ) ಅವುಗಳಲ್ಲಿ ಒಟ್ಟು ಎಷ್ಟು ಪ್ರಕರಣಗಳು ತೀರ್ಮಾನವಾಗಿವೆ ಹಾಗೂ ಗೇಣಿದಾರರ ಪರ ಮತ್ತು ವಿರುದ್ಧವಾಗಿ ಆದ ತೀರ್ಮಾನಗಳೆಷ್ಟು?

ಇ) ಉಚಿತ ಕಾನೂನು ನೆರವು ಪಡೆದು ಬರುವ ಗೇಣಿದಾರರ ಬಗ್ಗೆ ಅಸಡ್ಡೆಯಿಂದ ನಡೆದುಕೊಳ್ಳುವ ಮಂಡಳಿಯ ಅವಶ್ಯಕತೆ ಇದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವರು):

ಅ) 1986ರಿಂದ 1990ರವರೆಗೆ 138 ಪ್ರಕರಣಗಳು ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಮುಖೇನ ದಾಖಲಾಗಿಸಿದೆ.

ಆ) ಅವುಗಳಲ್ಲಿ ಒಟ್ಟು 91 ಪ್ರಕರಣಗಳು ತೀರ್ಮಾನವಾಗಿವೆ. ಅದರಲ್ಲಿ 52 ಪ್ರಕರಣಗಳು ಕಾನೂನು ನೆರವು ಅರ್ಜಿದಾರರ ಪರವಾಗಿ ತೀರ್ಮಾನಿಸಲ್ಪಟ್ಟು ಮರು ವಿಚಾರಣೆಗೋಸ್ಕರ ಭೂ ನ್ಯಾಯ ಮಂಡಳಿಗೆ ಹಿಂತಿರುಗಿಸಲ್ಪಟ್ಟಿವೆ. ಹಾಗೂ 39 ಪ್ರಕರಣಗಳು ಅರ್ಜಿದಾರರ ವಿರುದ್ಧವಾಗಿರುತ್ತವೆ. ಇನ್ನುಳಿದ 47 ಪ್ರಕರಣಗಳು ಇತ್ಯರ್ಥವಾಗದೆ ಉಳಿದಿವೆ.

ಇ) ಇದುವರೆಗೆ ಯಾವ ಬಡ ಗೇಣಿದಾರರ ಬಗ್ಗೆ ಅಸಡ್ಡೆಯಿಂದ ನಡೆದುಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ರಮಾನಾಥ ರೈ ಅವರೇ ಇವತ್ತು ನಿಮ್ಮ ಹುಟ್ಟಿದ ಹಬ್ಬ. ಸದನದ ಪರವಾಗಿ ನಿಮಗೆ ಹಾರ್ದಿಕ ಶುಭಾಷಯಗಳು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಬರೀ ಶುಭಾಶಯ ಹೇಳಿದರೆ ಸಾಕಾಗುವುದಿಲ್ಲ. ಏನಾದರೂ ಒಂದು ಕಾಣಿಕೆ ಅಥವಾ ಸ್ವೀಟನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಇನ್ನು ಮೇಲೆ ಒಂದು ಗೂಲಾಬಿ ಹೂವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸದಸ್ಯರುಗಳಿಗೇ ತಮ್ಮ ಹುಟ್ಟಿದ ಹಬ್ಬ ಎಂದು ಗೊತ್ತಿರುವುದಿಲ್ಲ. ಮೊನ್ನೆ ಒಂದು ಮಾನ್ಯ ಗುಜ್ಜಾಲ ಹನುಮಂತಪ್ಪನವರಿಗೆ ಇದೇ ರೀತಿ ಹೇಳಿದ್ರಿ. ಅವರು ಗಲಿಬಿಲಿ ಆಗಿಬಿಟ್ಟು. ಅದ್ದರಿಂದ ಇದನ್ನು ಸ್ವಲ್ಪ ಮುಂಚಿತವಾಗಿ ತಿಳಿಸಿದರೆ ಒಳ್ಳೆಯದು ಹಾಗೂ ಮಾನ್ಯ ಮಲ್ಲಾರಿ ಗೌಡ ಪಾಟೀಲರು ಹೇಳಿದ ಹಾಗೆ ಸ್ವೀಟ್ ಕೊಡೋದು ಒಳ್ಳೆಯದು. ಅಥವಾ ಗುಲಾಬಿ ಹೂವು ಕೊಟ್ಟರೂ ಒಳ್ಳೆಯದು. ಆದರೆ ಮುಂಚಿತವಾಗಿ ತಿಳಿಸುವುದು ಒಳ್ಳೆಯದು.

ಒಬ್ಬರು ಮಾನ್ಯ ಸದಸ್ಯರು : ಕಮಲದ ಹೂ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಈ ಹೂವುಗಳ ಬಗ್ಗೆ ಎಚ್ಚರದಿಂದ ಇರಬೇಕು. ಯಾವ ಹೂವು ಕೊಟ್ಟರೂ ಫಜೀತಿ ಆದೀತು.

ಶ್ರೀ ಬಿ. ರಮಾನಾಥ ರೈ : ಕಮಲದ ಹೂ ಕೊಟ್ಟರೆ ನಾವು ಸ್ವೀಕಾರ ಮಾಡುವುದಿಲ್ಲ.

ಅಧ್ಯಕ್ಷರು : ಆಯಿತು. ತಾವು ಪ್ರಶ್ನೆ ಕೇಳಿ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಭೂ ನ್ಯಾಯ ಮಂಡಳಿಯಲ್ಲಿ ಗೇಣಿದಾರರಿಗೆ ವಿರುದ್ಧವಾಗಿ ತೀರ್ಮಾನವಾದ ಎಷ್ಟು ಪ್ರಕರಣಗಳು ಉಚಿತ ಕಾನೂನು ನೆರವು ಮಂಡಳಿ ಮೂಲಕ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಬಂದಿದೆಯೆಂದು ಕೊಶ್ಚನ್ ಕೇಳಿದ್ದೇನೆ. 1986ರಿಂದ 90ರವರೆಗೆ 138 ಪ್ರಕರಣಗಳಿಂದು ಉತ್ತರ ಕೊಟ್ಟಿದ್ದಾರೆ. ಅವುಗಳಲ್ಲಿ ಎಷ್ಟು ಪ್ರಕರಣ ತೀರ್ಮಾನವಾಗಿವೆ? ಎಷ್ಟು ಪ್ರಕರಣಗಳು ಗೇಣಿದಾರರ ಪರವಾಗಿ ಮತ್ತು ಎಷ್ಟು ವಿರುದ್ಧವಾಗಿ ತೀರ್ಮಾನವಾಗಿವೆ ಎನ್ನುವ ಪ್ರಶ್ನೆಗೆ 52 ಪ್ರಕರಣಗಳು ಅರ್ಜಿದಾರರ ಪರವಾಗಿ ಮತ್ತು 39 ವಿರುದ್ಧವಾಗಿ ಆಗಿವೆ ಎನ್ನತಕ್ಕ ಉತ್ತರವನ್ನು ಕೊಟ್ಟಿದ್ದಾರೆ. 47 ಪ್ರಕರಣಗಳು ಇತ್ಯರ್ಥವಾಗದೆ ಉಳಿದಿವೆಯೆಂದು ಹೇಳಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೆ, ನನ್ನ ಗಮನಕ್ಕೆ ಬಂದಂತೆ ಬಡ ಗೇಣಿದಾರರ ವಿರುದ್ಧವಾಗಿ ಏನು ತೀರ್ಮಾನವಾದ ಪ್ರಕರಣಗಳನ್ನು ಉಚ್ಚ ನ್ಯಾಯಾಲಯಕ್ಕೆ ಉಚಿತ ಕಾನೂನು ನೆರವು ಮಂಡಳಿಯ ವಕೀಲರುಗಳಿಗೆ ರೆಫರ್ ಮಾಡುತ್ತಾರೆ. ಅಂಥಾ ವಕೀಲರುಗಳು ಸರಿಯಾಗಿ ಗಮನ ಕೊಡುವುದಿಲ್ಲ, ಯಾಕೆಂದರೆ ಉಚಿತ ಎನ್ನುವ ಬಗ್ಗೆ ಕಾಳಜಿ ವಹಿಸುವುದಿಲ್ಲ. ನಾನು ಅನೇಕ ಪ್ರಕರಣಗಳನ್ನು ನಮ್ಮ ಮಂಗಳೂರು ಉಚಿತ ನ್ಯಾಯ ಮಂಡಲಿ ಮೂಲಕ ಕಳಿಸಿಕೊಟ್ಟಿದ್ದೇನೆ. ಅದು ಹೈಕೋರ್ಟಿನಲ್ಲಿ ಕ್ವಾಶ್ ಆಗಿ ಬಂದಿದೆ ಮತ್ತೆ ಅವರಿಗೆ ಮುಂದೆ ಕೋರ್ಟಿಗೆ ಹೋಗಲಿಕ್ಕೆ ಅಸಾಧ್ಯವಾಗಿರತಕ್ಕ ಪರಿಸ್ಥಿತಿ ಇದೆ. ಇವರ ಅಂಕಿ ಅಂಶಗಳ ಪ್ರಕಾರ 39 ಪ್ರಕರಣಗಳು ವಿರುದ್ಧವಾಗಿದೆ ಮತ್ತು 52 ಪ್ರಕರಣಗಳು ಪರವಾಗಿದೆ ಎಂದು ವಿವರ ಕೊಟ್ಟಿದ್ದಾರೆ. ಇವತ್ತು ಉಚಿತ ಕಾನೂನು ಮೂಲಕ ಯಾವುದನ್ನು ವಕೀಲರಿಗೆ ರೆಫರ್ ಮಾಡುತ್ತಾರೆ, ಅವರು ಅಸಡ್ಡೆಯಿಂದ ವರ್ತನೆ ಮಾಡುತ್ತಾರೆ ಎನ್ನತಕ್ಕಂಥದ್ದು ನನ್ನ ಗಮನಕ್ಕೆ ಬಂದಿದೆ. ಇದರ ಬದಲಾಗಿ ಉಚಿತ ಕಾನೂನು ನೆರವು ಮೂಲಕ ಅವರ ಪರವಾಗಿ ವಾದ ಮಾಡಲಿಕ್ಕೆ ಸರ್ಕಾರವೇ ಸಂಬಳ ಕೊಟ್ಟು ವಕೀಲರನ್ನು ನೇಮಿಸತಕ್ಕ ಒಂದು ವ್ಯವಸ್ಥೆ ಮಾಡಿದರೆ ಇದರಿಂದ

ಬಹಳ ಅನುಕೂಲವಾಗುತ್ತದೆ. ಈ ಕ್ರಮವನ್ನು ಯಾಕೆ ಕೈಗೊಳ್ಳಬಾರದು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ : ನಮ್ಮ ಹತ್ತಿರ ಕರ್ನಾಟಕ ಲೀಗಲ್ ಏಡ್ ಬೋರ್ಡ್ ಎಂದು ಹೇಳಿ 1986ರಲ್ಲಿ ಮಾಡಿ ಅದರ ಮೂಲಕ ಈ ಎಲ್ಲಾ ತೀರ್ಮಾನಗಳನ್ನು ಕಳಿಸುತ್ತೇವೆ. ಲೀಗಲ್ ಏಡ್ ಬೋರ್ಡ್ ಎಂದು ಮಾಡಿ ಯಾರು ಅಪ್ಲಿಕೇಶನ್ಸ್ ಕೊಡುತ್ತಾರೆ, ಪಿಟಿಷನರ್ಸ್ ಅವರಿಗೆ ನಾವು ಲೀಗಲ್ ಅಸಿಸ್ಟೆನ್ಸ್ ಕೊಡುತ್ತೇವೆ. ಅಡ್ವೋಕೇಟ್ಸ್ ಪ್ಯಾನೆಲ್ಸ್ ಇರುತ್ತವೆ. ಆ ಪ್ಯಾನೆಲ್ಸ್ ಮುಖಾಂತರ ಅಡ್ವೋಕೇಟ್ಸ್ ಕೇಸಸ್ ಕಂಡಕ್ಟ್ ಮಾಡುತ್ತಾರೆ. ಅದೇ ಪ್ರಕಾರ 138 ಕೇಸಸ್ ಮಂಗಳೂರಿನಲ್ಲಿ ಬಂದಿದೆ. ಅಲ್ಲಿನ 91 ಕೇಸಸ್‌ನಲ್ಲಿ 39 ಕೇಸಸ್‌ಗಳು ಡಿಸ್ಪೋಸ್ಟ್ ಆಗಿದ್ದಾವೆ, 39 ಕೇಸಸ್‌ಗಳು ಡಿಸ್‌ಮಿಸ್ ಆಗಿದ್ದಾವೆ. ಈ ಪ್ರಕಾರ ಮಾನ್ಯ ಸದಸ್ಯರು ಹೇಳುವ ಥಲಹೆ ಉತ್ತಮ. ಅಂತಹ ಅವಸರ ಇದ್ದಾಗ ಅದನ್ನು ಗವರ್ನಮೆಂಟ್ ಗಮನಕ್ಕೆ ಬಂದರೆ ಅಡ್ವೋಕೇಟ್ಸ್ ಕೊಡುವ ವಿಚಾರ ಮಾಡಿ, ಅಡ್ವೋಕೇಟ್ಸ್ ಕೊಡಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಆದರೆ ಯಾವ ಪ್ರಕಾರದಿಂದಲೂ ಇಲ್ಲಿಯವರೆಗೆ ಪಿಟಿಷನರ್ಸ್‌ರಿಂದ ಕಂಪ್ಲೆಟ್ಸ್ ಬಂದಿಲ್ಲ. ಅವರ ಮೇಲೆ ತೊಂದರೆ ಇತ್ತು ಅಥವಾ ಸರಿಯಾಗಿ ಅಡ್ವೋಕೇಟ್ ವರ್ಕ್ ಮಾಡಿಲ್ಲ ಎನ್ನುವುದಾಗಲೀ ಥಥವಾ ಪಿಟಿಷನರ್ಸ್‌ಗೆ ಎಂಟರ್‌ಟೈನ್ ಮಾಡಿಲ್ಲ ಎನ್ನುವ ಆಪಾದನೆಗಳೂ ಇಲ್ಲ. ಥಂತಹ ಯಾವುದೇ ಅಪವಾದಗಳು ಇಲ್ಲ.

ಯಾಕೆಂದರೆ ಎಲ್ಲಾ ತಾಲ್ಲೂಕುಗಳಲ್ಲಿ ನಮ್ಮ ಹತ್ತಿರ ಲೀಗಲ್ ಏಡ್ ಬೋರ್ಡ್ ಇವೆ ಮತ್ತು ಮಂಗಳೂರಿನಲ್ಲಿ ಕೂಡ ಲೀಗಲ್ ಅಡ್ ಬೋರ್ಡ್ ಇವೆ ಅವುಗಳನ್ನು ಯಾರು ಪಿಟಿಷನರ್ಸ್ ಬಂದರೂ ಅವರಿಗೆ ಸಹಾಯ ಮಾಡುತ್ತೇವೆ. ಆದರೂ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅಂತಹ ವಿಶೇಷವಾದ ಕೇಸಸ್‌ಗಳು ಬಂದಾಗ ಗವರ್ನಮೆಂಟ್‌ನವರು ಸ್ಪೆಷಲ್ ಅಡ್ವೋಕೇಟ್ ಅವರನ್ನು ಅಪಾಯಿಂಟ್ ಮಾಡುವ ಪ್ರಯತ್ನ ಮಾಡುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ರಮಾನಾಥ ರೈ ಅವರು ಕೇಳಿರುವುದು ಹಲವಾರು ಮೊಕದ್ದಮೆಗಳು ನಮ್ಮ ಹೈಕೋರ್ಟಿನಲ್ಲಿ ಮುಗಿದಿದೆ. ಬಹಳ ಮೊಕದ್ದಮೆಗಳು ಈಗ ನಮ್ಮ ಸುಪ್ರೀಂ ಕೋರ್ಟಿಗೆ ಹಾಕಬೇಕಾಗಿದೆ. ಅಲ್ಲಿಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಆದರಲ್ಲಿ ವಿಳಂಬ ಆಗುತ್ತದೆ. ಸುಮ್ಮನೇ ಪತ್ರಗಳನ್ನು ಬರೆಯುತ್ತಾರೆ. ನಿಮ್ಮ ಉಚಿತ ನ್ಯಾಯ ಮಂಡಲಿಯಿಂದ. ಶ್ರೇಷ್ಠ ನ್ಯಾಯಾಲಯಕ್ಕೆ ನಾವು ಕಳಿಸಿ ಕ್ರಮ ತೆಗೆದುಕೊಂಡ ಮೇಲೆ ನಿಮಗೆ ಮತ್ತೆ ತಿಳಿಸುತ್ತೇವೆ ಎಂದು ಹೇಳುತ್ತಾರೆ. ಆತರೆ ಏನೂ ಕ್ರಮತೆಗೆದುಕೊಳ್ಳುತ್ತಿಲ್ಲ. ಸುಪ್ರೀಂ ಕೋರ್ಟ್ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಕರ್ನಾಟಕ ಸರ್ಕಾರ ಏನಾದರು ವ್ಯವಸ್ಥೆಯನ್ನು ಈ ವಿಚಾರದಲ್ಲಿ ಮಾಡಿದೆಯೇ?

ಶ್ರೀ ಬಿ. ಶಿವಣ್ಣ : ನಾವು ಸುಪ್ರೀಂ ಕೋರ್ಟಿಗೆ ಹೋಗುವ ಮುಂಚೆ ಲಾ ಡಿಪಾರ್ಟ್‌ಮೆಂಟಿನಿಂದ ಮುಂದೆ ಅಪೀಲ್ ಮಾಡಬೇಕು ಎಂದು ಸಲಹೆ ಮಾಡುತ್ತಾರೆ. ಇಂತಹ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟಿನಲ್ಲಿ ಸಹ ವಾದ ಮಾಡಲು ಅಡ್ವೋಕೇಟ್ಸ್ ನೇಮಕ ಮಾಡಿದ್ದೇವೆ.